**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ಶ್ರೀ ಕೆ. ಸುರೇಶ್, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚಾಂತಾರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಪತ್ರ ಸಂಖ್ಯೆ: D.O.NO.Compt/Uplok/MYS-2410/2016/PP Dated: 27-05-2017

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3)ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 15-05-2017 ರ ವರದಿಯಲ್ಲಿ ದೂರುದಾರರಾದ ಶ್ರೀ ಸದಾಶಿವ ಶೆಟ್ಟಿ ಇವರು ಸಲ್ಲಿಸಿದ ದೂರಿನಲ್ಲಿ ಚಾಂತಾರು ಗ್ರಾಮ ಪಂಚಾಯತ್ ವತಿಯಿಂದ 2011 ರಿಂದ 2016 ರವರೆಗೂ ಸಾವಿರಾರು ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿರುತ್ತದೆ. ಪ್ರತಿಯೊಂದ ಫಲಾನುಭವಿಯಿಂದ 50/- ರೂಗಳನ್ನು ವಸೂಲು ಮಾಡಿರುವುದಾಗಿ ಸುಮಾರು 3 ರಿಂದ 4 ಲಕ್ಷ ಹಣ ಸಂದಾಯವಾಗಿರುತ್ತದೆ. ಆದರೆ ಈ ಹಣವನ್ನು ಯಾವುದೇ ಬ್ಯಾಂಕ್ ಖಾತೆಗೆ ಸರ್ಕಾರದ ಹೆಸರಿನಲ್ಲಿ ಜಮೆ ಮಾಡಿರುವುದಿಲ್ಲ. ಸದರಿ ವಿಷಯದ ಕುರಿತು ದೂರು ನೀಡಿದ ನಂತರ ದಿನಾಂಕ: 06/06/2016 ರಂದು ಬ್ರಹ್ಮವರದ ವಿಜಯ ಬ್ಯಾಂಕ್‌ನಲ್ಲಿ ಖಾತೆ ತೆರೆದು 1,85,000/- ರೂ.ಗಳನ್ನು ಜಮೆ ಮಾಡಲಾಗಿರುತ್ತದೆ. ಈ ಹಿಂದೆ ಹೇಳಿದಂತೆ ಸದರಿ ಮೊತ್ತವನ್ನು ಗ್ರಾ.ಪಂ. ಪಿಡಿಓ ಶ್ರೀ ಕೆ.ಸುರೇಶ್ ಹಾಗೂ ರೇಷನ್ ಕಾರ್ಡ್ ಸಿಬ್ಬಂದಿ ಶ್ರೀಮತಿ ಗೀತಾ ರವರು ಹಂಚಿಕೊಂಡಿರುವುದಾಗಿ ಕಂಡು ಬರುತ್ತದೆ. ಮಾಹಿತಿ ಹಕ್ಕು ಅಧಿನಿಯಮದಡಿ ನೀಡಿರುವ ಮಾಹಿತಿ ಪ್ರಕಾರ 50 ಸಾವಿರ ರೂ.ಗಳನ್ನು ಸರ್ಕಾರಕ್ಕೆ ಕಟ್ಟಲಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ. ತಾಲ್ಲೂಕು ಕಛೇರಿ ನೀಡಿರುವ ಮಾಹಿತಿ ಪ್ರಕಾರ ಕೇವಲ 23 ಸಾವಿರ ರೂ.ಗಳನ್ನು ಸಂದಾಯ ಮಾಡಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ನೀಡಿದ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಿರುತ್ತಾರೆ.

ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು ಹಾಗೂ ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ಉಡುಪಿಯ ಆರಕ್ಷಕ ಅಧೀಕ್ಷಕರಿಗೆ ವಹಿಸಲಾಗಿರುತ್ತದೆ. ತನಿಖೆಯನ್ನು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತರ ಉಡುಪಿ ಇವರಿಗೆ ವಹಿಸಿದ್ದು ಸದರಿಯವರು ದಿ:17/01/2017 ರಂದು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ.

ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನಂಶಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ಸಾರ್ವಜನಿಕರಿಂದ ಸ್ವೀಕರಿಸಿದ ಮೊತ್ತವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಪಾವತಿಸಿಕೊಳ್ಳಲಾಗಿರುತ್ತದೆ. ಉಳಿದ ಮೊತ್ತಕ್ಕೆ ಸರಿಯಾಗಿ ಸರ್ಕಾರದ ಮಾರ್ಗದರ್ಶನ ಇಲ್ಲದೆ ಇದ್ದಿದ್ದರಿಂದ ನಗದಾಗಿ ಇದ್ದುದನ್ನು ತಾಲ್ಲೂಕು ಪಂಚಾಯತಿಯ ಮಾಸಿಕ ಪರಿಶೀಲನಾ ಸಭೆಯಲ್ಲಿ ಪಂಚಾಯತಿ ಅಧ್ಯಕ್ಷರ ಸೂಚನೆ ಮೇರೆಗೆ ಹೊಸ ಬ್ಯಾಂಕ್ ಖಾತೆ ತೆರೆದು ಸರ್ಕಾರದಿಂದ ಮುಂದಿನ ಸೂಚನೆ ಬರುವವರೆಗೂ ಸದರಿ ಖಾತೆಯಲ್ಲಿ ಜಮಾ ಮಾಡಲಾಗಿರುತ್ತದೆ. ದೂರುದಾರರು ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆ. 201314ನೇ ಸಾಲಿನಲ್ಲಿ ವಸೂಲಾದ ಮೊತ್ತ ನವೀಕರಣಕ್ಕೆ ರೂ.50,250/- ಮತ್ತು ಹೊಸ ಪಡಿತರ ಚೀಟಿಗೆ ರೂ.30,750/- ಒಟ್ಟು ರೂ.81,000/- ಬಂದಿದ್ದು, 2014-15ನೇ ಸಾಲಿಗೆ ನವೀಕರಣಕ್ಕಾಗಿ ರೂ.54,350/- ಹಾಗೂ ಹೊಸ ಪಡಿತರ ಚೀಟಿಗೆ ರೂ.31,050 ಒಟ್ಟು ರೂ.85,400/- ವಸೂಲಿಯಾಗಿದ್ದು, ಈ ಮೊತ್ತವನ್ನು ತಾಲ್ಲೂಕು ಕಛೇರಿಯ ಲೆಕ್ಕ ಶೀರ್ಷಿಕೆ 0408001011107 ಇದಕ್ಕೆ ಪಾವತಿ ಮಾಡಲಾಗಿರುತ್ತದೆ. 2015-16ನೇ ಸಾಲಿನಿಂದ ಇದುವರೆಗೂ ಸಂಗ್ರಹವಾದ ಒಟ್ಟು ಮೊತ್ತ ರೂ.1,80,164/- ಅನ್ನು ಈಗಿರುವ ಪಂಚಾಯತಿ ಅಭಿವೃದಿ ಅಧಿಕಾರಿಯವರು ವಿಜಯ ಬ್ಯಾಂಕ್ ಬ್ರಹ್ಮಾವರ ಶಾಖೆಗೆ ಎಸ್‌ಬಿ ಖಾತೆ ಸಂ:103701011003784 ಇದಕ್ಕೆ ಜಮಾ ಮಾಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ದೂರಿಗೆ ಸಂಬಂಧಿಸಿದಂತೆ ತನಿಖಾಧಿಕಾರಿಯವರು ಉಪನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಉಡುಪಿ ಜಿಲ್ಲೆ ಇವರಿಂದ ಹಾಗೂ ತಹಶೀಲ್ದಾರ್, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ಇವರಿಂದ ವರಿಯನ್ನು ಪಡೆದಿರುತ್ತಾರೆ. ತಹಶೀಲ್ದಾರ್‌ರವರು ತಮ್ಮ ವರದಿಯಲ್ಲಿ ಆನ್‌ಲೈನ್ ದಾಖಲಾತಿಯಂತೆ ಚಾಂತಾರು ಪಂಚಾಯತಿ ಮೂಲಕ ಸ್ವೀಕೃತವಾದ ಪಡಿತರ ಚೀಟಿಗಳ ವಿತರಣೆಯಲ್ಲಿ 35899 ಪಡಿತರ ಚೀಟಿಗಳಿಗೆ ರೂ.20/- ರಂತೆ ಹಣವನ್ನು ಸ್ವೀಕರಿಸಿದ್ದು ರೂ.50/- ರಂತೆ ಹಣ ಸ್ವೀಕರಿಸಿದ ಬಗ್ಗೆ ತಮಗೆ ಮಾಹಿತಿ ಇರುವುದಿಲ್ಲವೆಂದು, ಸ್ವೀಕೃತವಾದ ಹಣದಲ್ಲಿ

ಒಟ್ಟು ರೂ. 20,920/- ಅನ್ನು ಸರ್ಕಾರದ ಖಾತೆಗೆ ಜಮಾ ಮಾಡಲಾಗಿರುತ್ತದೆ. ಬಾಕಿ ಇರಿಸಿದ ಅರ್ಜಿ ಶುಲ್ಕದ ಮೊತ್ತ ರೂ.1,79,450/- ಇರುತ್ತದೆ ಎಂದು ತಿಳಿಸಿರುತ್ತಾರೆ.ನಂತರ ದೂರಿಗೆ ಸಂಬಂಧಿಸಿದಂತೆ ಕೋರಲಾಗಿದ್ದು,2011ನೇ ಸಾಲಿನವರೆಗೆ 1497 ಜನರು ಹೊಸ ಪಡಿತರ ಚೀಟಿಗೆ ನೊಂದಾಯಿಸಿರುತ್ತಾರೆ. ಪ್ರತಿ ಪಡಿತರ ಚೀಟಿಗೆ ನೋಂದಾಯಿಸಿರುತ್ತಾರೆ. 2092 ಜನರು ಪಡಿತರ ಚೀಟಿ ನವೀಕರಣಕ್ಕೆ ನೊಂದಾಯಿಸಿರುತ್ತಾರೆ. ಪ್ರತಿ ಪಡಿತರ ಚೀಟಿ ಆನ್‌ಲೈನ್ ಪ್ರಕ್ರಿಯೆಗೆ ಕುಟುಂಬದಲ್ಲಿ 4 ಕ್ಕಿಂತ ಹೆಚ್ಚು ಸದಸ್ಯರಿದ್ದಲ್ಲಿ ರೂ.25/-, 4 ಕ್ಕಿಂತ ಹೆಚ್ಚು ಸದಸ್ಯರಿದ್ದಲ್ಲಿ ಪ್ರತಿ ಸದಸ್ಯರಿಗೆ ರೂ.5/- ರಂತೆ ವಸೂಲಿ ಮಾಡಲಾಗಿತ್ತಿದೆ. ಚಾಂತಾರು ಗ್ರಾಮ ಪಂಚಾಯತಿಯಲ್ಲಿ ಆನ್‌ಲೈನ್ ಪ್ರಕ್ರಿಯೇ ಪ್ರಾರಂಭವಾದ ದಿನದಿಂದ 16/06/2016 ರವರಿಗೆ ವಸೂಲಾತಿ ಮಾಡಿದ ಮೊತ್ತ ರೂ.1,80,460/- ಹಾಗೂ ಪಡಿತರ ಚೀಟಿ ವಿತರಣೆ ಬಗ್ಗೆ ರೂ.20,640/- ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

ನಂತರ ದೂರು ಅರ್ಜಿಗೆ ಸಂಬಂಧಿಸುದಂತೆ ತನಿಖಾಧಿಕಾರಿಯವರು ಹಿರಿಯ ಉಪನಿರ್ದೇಶಕರು ಹಿರಿಯ ಉಪನಿರ್ದೇಶಕರು,ಸ್ಥಳೀಯ ಲೆಕ್ಕಪರಿಶೋಧನ ವರ್ತಲ,ಉಡುಪಿ ಇವರಿಗೆ 27ನೇ ಚಾಂತಾರು ಗ್ರಾಮ ಪಂಚಾಯತಿ ವ್ಯಾಪ್ತಿಯ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಮತ್ತು ದಾಖಲಾತಿಗಳನ್ನು ಒದಗಿಸುವಂತೆ ಕೋರಿದ್ದು,ಅವರು ದಿ:25/11/2016 ರಂದು ನೀಡಿದ ವರದಿಯನ್ನು ನೀಡಿರುತ್ತಾರೆ.ಸದರಿ ವರದಿಯಲ್ಲಿ 2010-11ನೇ ಸಾಲಿನಿಂದ 2014-15ನೇ ಸಾಲಿನವರೆಗೆ ಅಂದರೆ ದಿ:01/04/2010 ರಿಂದ 31/03/2015 ರವರೆಗೆ ನಡೆದಿರುವ ಲೆಕ್ಕಪರಿಶೋಧನಾ ವರದಿಯನ್ನು ನೀಡಿದ್ದು,2015-2016ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಳಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ವರದಿಯಲ್ಲಿ ತಿಳಿಸಿರುತ್ತಾರೆ.ಸದರಿ ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿದ್ದಲ್ಲಿ ರೇಷನ್ ಕಾರ್ಡ್ ಸಿಬ್ಬಂದಿ ಶ್ರೀಮತಿ ಗೀತಾ ರವರು ಮಾಸಿಕ ರೂ,3500/- ರಂತೆ ನಮೂದಿಸಿರುವುದು ಕಂಡು ಬಂದಿರುತ್ತದೆ.ಸದರಿ ಸಿಬ್ಬಂದಿಯವರನ್ನು ಜಿಲ್ಲಾ ಪಂಚಾಯತ್‌ನಿಂದ ನೇಮಕಾತಿ ಬಗ್ಗೆ ಮಂಜೂರಾತಿಯನ್ನು ಪಡೆದುಕೊಳ್ಳದೇ ಇರುವುದು ಕಂಡು ಬಂದಿರುತ್ತದೆ.

ಪಡಿತರ ಚೀಟಿ ವಿತರಣೆಗೆ ಸಂಬಂಧಿಸಿದಂತೆ ಚಾಂತಾರು ಗ್ರಾಮ ಪಂಚಾಯಿತಿಯಿಂದ ದಿ:01/07/2012 ರಿಂದ ಆನ್ ಲೈನ್ ಪ್ರಕ್ರಿಯೇ ಪ್ರಾರಂಭಿಸಿದ್ದು,ಇದುವರೆಗೆ ರೂ.181498/- ಗ್ರಾಮ ಪಂಚಾಯತ್‌ನ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿರುತ್ತದೆ. ಆದರೆ,2012-13ನೇ ಸಾಲಿನಲ್ಲಿ 218 ಪಡಿತರ ಚೀಟಿ ಅರ್ಜಿಗಳ ವಿಲೇವಾರಿ ಬಗ್ಗೆ ದಾಖಲೆ ಇದ್ದು,ಸದರಿ ಪಡಿತರ ಚೀಟಿಗೆ ಸಂಬಂಧಿಸಿದ ಹಣವನ್ನು ಸರ್ಕಾರದ ಖಾತೆಗ ಜಮಾ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳಿರುವಿದಿಲ್ಲ.ಈ ದೂರು ಅರ್ಜಿಗೆ ಸಂಬಂಧಿಸಿದಂತೆ ಕೈಗೊಳ್ಳಲಾದ ಕ್ರಮದ ಬಗ್ಗೆ ದಾಖಲಾತಿ ಒದಗಿಸುವಂತೆ ಮುಖ್ಯಕಾರ್ಯನಿರ್ವಾಹಕಾಧಿಕಾರಿಯವರಿಗೆ ಕೋರಲಾಗಿದ್ದು,ಅವರು ಕೊಟ್ಟ ವರದಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಇವರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿರುವುದು ಕಂಡು ಬರುತ್ತದೆ.

2013-14,2014-15, 2015-16ಮತ್ತು 2016-17 ನೇ ಸಾಲಿನಲ್ಲಿ ರೂ.1,81,498/- ಅನ್ನು ಗ್ರಾಮ ಪಂಚಾಯತಿ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಲಾಗಿರುತ್ತದೆ. ಆದರೆ, 2012-13ನೇ ಸಾಲಿನ 218 ಪಡಿತರ ಚೀಟಿಗಳ ಅರ್ಜಿ ವಿಲೇವಾರಿ ಸಂಬಂಧಿಸಿದಂತೆ ಸರ್ಕಾರದ ಲೆಕ್ಕಶೀರ್ಷಿಕೆಗೆ ಹಣ ಜಮಾ ಮಾಡದೇ ಇರುವುದು ಕಂಡು ಬಂದ ಕಾರಣ, ಶ್ರೀ ಕೆ. ಸುರೇಶ್,ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಇವರಿಗೆ ಕಾರಣ ಕೇಳುವ ನೋಟೀಸ್ ಅನ್ನು ನೀಡಲಾಗಿರುತ್ತದೆ ಎಂದು ಕಂಡು ಬರುತ್ತದೆ. ದಿ:25/06/2012ರಿಂದ 15/09/2015 ರವರೆಗೆ ಶ್ರೀ ಕೆ. ಸುರೇಶ್ ರವರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡಿದ್ದು ಇದೇ ಅವಧಿಯಲ್ಲಿ 2012ನೇ ಡಿಸಂಬರ್ ನಿಂದ 2013ನೇ ಜೂನ್ ತನಕ ರೇಷನ್ ಕಾರ್ಡ್ ಸಿಬ್ಬಂದಿಯಾಗಿ ಕೆಲಸ ನಿರ್ವಹಿಸಿಕೋಂಡು ಹೋಗಲು ನೇಮಕ ಮಾಡಿಕೊಂಡಿರುವುದು ಕಂಡುಬರುತ್ತದೆ.ಇದರ ಅವಧಿಯಲ್ಲಿ ರೂ 50/- ರಂತೆ 261 ಪಡಿತರ ಅರ್ಜಿಯನ್ನು ಸ್ವೀಕರಿಸಿದ್ದು,ಕೇವಲ ರೂ.1,380/- ಕ್ಕೆ ಚಲನ್ ಕಟ್ಟಿದ್ದು ಕಂಡುಬರುತ್ತದೆ. 2013-14 ನೇ ಸಾಲಿನಲ್ಲಿ ರೂ.50/- ರಂತೆ ಸ್ವೀಕರಿಸಿ 1005 ಅರ್ಜಿಗಳನ್ನು ವಿತರಣೆ ಮಾಡಲಾಗಿದ್ದು ಹಾಗೂ ರೂ.20/- ರಂತೆ 356 ಅರ್ಜಿಗಳನ್ನು ಪಡೆಯಲಾಗಿದ್ದು,ಸರ್ಕಾರಕ್ಕೆ ಚಲನ್ ಮೂಲಕ ರೂ.6780/-- ಅನ್ನು ಪಾವತಿಸಿರುವುದು ಕಂಡುಬಂದಿರುತ್ತದೆ.

2014-15 ಸಾಲಿನಲ್ಲಿ ನವೀಕರಣದ ಬಗ್ಗೆ ರೂ. 50/- ರಂತೆ 1087 ಅರ್ಜಿಗಳನ್ನು ಸ್ವೀಕರಿಸಿದ್ದು ಹಾಗೂ ಹೊಸ ಪಡಿತರ ಚೀಟಿಗೆ ತಲಾ ರೂ.50/- ರಂತೆ 621 ಅರ್ಜಿಗಳನ್ನು ಸ್ವೀಕರಿಸಿದ್ದು,ರೂ.5100/- ಅನ್ನು ಸರ್ಕಾರಕ್ಕೆ ಚಲನ್ ಮೂಲಕ ಪಾವತಿಸಿರುವುದು ಕಂಡು ಬಂದಿರುತ್ತದೆ.ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಸುರೇಶ್ ಕೆ ರವರ ಪಡಿತರ ಚೀಟಿಯಿಂದ ಬಂದಿದ್ದ ಹಣವನ್ನು ಆಯಾ ತಿಂಗಳಿನ ಕೊನೆಯಲ್ಲಿ ಅಥವಾ ವರ್ಷದ ಅಂತ್ಯಕ್ಕೆ ನಿಯಮಾನುಸಾರ ಸಂಪೂರ್ಣವಾಗಿ ಚಲನ್ ಮೂಲಕ ಪಾವತಿಸದೇ ಅಲ್ಪ ಪ್ರಮಾಣದ ಹಣವನ್ನು ಸರ್ಕಾರಕ್ಕೆ ಪಾವತಿಸಿರುವುದು ಹಾಗೂ ಉಳಿದ ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡದೇ ತಮ್ಮ ಬಳಿಯೇ ಇಟ್ಟುಕೊಂಡಿದ್ದು ದೂರುದಾರರು ದೂರು ನೀಡಿದ ನಂತರ ಬ್ರಹ್ಮಾವರ ವಿಜಯ ಬ್ಯಾಂಕ್ ಶಾಖೆಯಲ್ಲಿ ಹಣ ಜಮಾ ಮಾಡಿರುವುದು ಕಂಡು ಬರುತ್ತದೆ ಎಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

ಸದರಿ ದೂರುದಾರರ ದೂರು ಅರ್ಜಿ ಮತ್ತು ಮಾನ್ಯ ಉಪಲೋಕಾಯುಕ್ತ ವರದಿಯಂತೆ ಎದುರುದಾರರಾದ ಶ್ರೀ ಕೆ. ಸುರೇಶ್, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚಾಂತಾರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪ್ರಾಮಾಣಿಕತೆ,ಸಂಪೂರ್ಣ ನಿಷ್ಠೆ ತೋರದೆ, ಕರ್ತವ್ಯಲೋಪವೆಸಗಿ ಅವ್ಯವಹಾರ, ದುರ್ನಡತೆಯಿಂದ ವರ್ತಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮ 1957 ರ 14-ಎ ರನ್ವಯ ಎದುರುದಾರರ ವಿರುದ್ಧ ವಿಚಾರಣೆ ಮಾಡಲು ಈ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ನಿರ್ಣಯಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/506/ಗ್ರಾಪಂಕಾ/2017 ಬೆಂಗಳೂರು, ದಿನಾಂಕ:17-06-2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕೆ. ಸುರೇಶ್, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು(ಪ್ರಭಾರ), ಚಾಂತಾರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.(ಇದರೊಂದಿಗೆ ಈ ಪ್ರಕರಣದ ಮೂಲ ದಾಖಲಾತಿಯನ್ನು ಪುಟ ಸಂಖ್ಯೆ 01 ರಿಂದ 262 ರವರೆಗೆ ಲಗತ್ತಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ.
6. ಶ್ರೀ ಕೆ. ಸುರೇಶ್, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಚಾಂತಾರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.